# ಶ್ರೀಮಾತೆಯವರ ಸ್ಮೃತಿ

ಬಂಗಾಳಿ ಮೂಲ : **ಸ್ವಾಮಿ ಪರಮೇಶ್ವರಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**




ಶ್ರೀಮಾತೆಯವರು ಆಗ ಜಯರಾಮಬಾಟಿಯ ಹೊಸ ಮನೆಯಲ್ಲಿ ವಾಸವಾಗಿದ್ದರು. ಅವರಿಗೆ ಆಗಾಗ ಮಲೇರಿಯಾ ಜ್ವರ ಬರುತ್ತಿತ್ತು. ಅವರ ಬಂಧುಬಾಂಧವರ ಜಂಜಾಟ, ತೊಂದರೆಗಳಿಗೆ ಕೊನೆಯೇ ಇರಲಿಲ್ಲ. ರಾಧಾರಾಣಿ ಮೊದಲಾದವರ ಬಯಕೆ, ಅಗತ್ಯಗಳನ್ನು ಈಡೇರಿಸುವುದರಲ್ಲೇ ಅವರು ಯಾವಾಗಲೂ ತೊಡಗಿರುತ್ತಿದ್ದರು. ನಡುನಡುವೆ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರೂ, ಹೆಚ್ಚಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದರು. ೧೯೧೬ರ ಜ್ಯೇಷ್ಠ ಮಾಸದಲ್ಲಿ ಶ್ರೀಮಾತೆಯವರು ಹೊಸ ಮನೆಯನ್ನು ಪ್ರವೇಶಿಸಿದರು. ಆ ಸಮಯದಲ್ಲಿ ಶ್ರೀಮಾತೆಯವರ ಬಳಿಗೆ ಬಂದವರೆಲ್ಲ ಈ ಮನೆಯಲ್ಲೇ ಅವರ ದರ್ಶನ ಪಡೆದು ಪೂಜೆ ಇತ್ಯಾದಿ ಮಾಡುತ್ತಿದ್ದರು. ಪ್ರಸನ್ನ ಮಾವನ[೧] ಮನೆಯಲ್ಲಿ ವಾಸವಾಗಿದ್ದಾಗ, ಯಾವ ಕಾರಣದಿಂದ ಅಷ್ಟು ಬೇಗನೆ ಹೊಸ ಮನೆಯನ್ನು ಕಟ್ಟಬೇಕಾಗಿ ಬಂತು, ಶ್ರೀಮಾತೆಯವರು ಅಲ್ಲಿ ವಾಸಮಾಡಲು ಯಾಕೆ ನಿರ್ಧರಿಸಿದರು – ಇದಕ್ಕೆ ಸಂಬಂಧಿಸಿದಂತೆ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸಬೇಕು.

[೧] ಪ್ರಸನ್ನ ಕುಮಾರ, ಶ್ರೀಮಾತೆಯವರ ತಮ್ಮ. *(–ಅನು)*

ಶ್ರೀಮಾತೆಯವರು ಚಿಕ್ಕ ವಯಸಿನಲ್ಲೇ ಆ ಕೋಣೆಯಲ್ಲಿ (ಪ್ರಸನ್ನ ಮಾವನ ಮನೆಯ ಒಂದು ಕೋಣೆಯಲ್ಲಿ) ವಾಸವಾಗಿದ್ದರು. ತಮ್ಮಂದಿರ ಮನೆ ಇತ್ಯಾದಿಗಳನ್ನು ಪಾಲು ಮಾಡುವಾಗ ಪ್ರಸನ್ನ ಮಾವನ ಮನೆಯ ಪಾಲಿಗೆ ಆ ಕೋಣೆ ಲಭಿಸಿತ್ತು. ಶ್ರೀರಾಮಕೃಷ್ಣರ ಭಾವಪ್ರಚಾರವಾಗುತ್ತ ಬಂದಂತೆ, ಶ್ರೀಮಾತೆಯವರ ಬಗೆಗೂ ಭಕ್ತರ ಹಾಗೂ ಶಿಷ್ಯರ ನಡುವೆ ಹೆಚ್ಚು ಪ್ರಚಾರವುಂಟಾಯಿತು; ನಾನಾ ಸ್ಥಳಗಳಿಂದ ಅನೇಕ ಮಂದಿ ಗಂಡಸರು, ಹೆಂಗಸರು ಶ್ರೀಮಾತೆಯವರ ಬಳಿಗೆ ಬರತೊಡಗಿದರು. ಆಗ ಅವರ ಬಳಿಗೆ ಯಾರೋ ಹತ್ತಿರದ ಸಂಬಂಧಿಕರು, ಮದುವೆಯಾದ ನಂತರ ಎರಡನೇ ಬಾರಿ ಬಂದಾಗ ಹೇಳಿದ್ದರು, ''ನಮ್ಮ ಮನೆಯಲ್ಲಿ ಈ ಜಂಜಾಟಗಳೆಲ್ಲ ಏಕೆ? ಇವೆಲ್ಲ ನನಗೆ ಹಿಡಿಸುವುದಿಲ್ಲ'' ಎಂದು. ಕೆಲವು ದಿನಗಳ ಮುನ್ನ ಪ್ರಸನ್ನ ಮಾವ ಶ್ರೀಮಾತೆಯವರಿಗೆ ಹೇಳಿದ್ದರು, ''ಅಕ್ಕ, ಇನ್ನು ಮೇಲೆ ಈ ಮನೆಯಲ್ಲಿರುವುದು ನಿನಗೆ ಸರಿಹೋಗದು. ನೀನು ಬೇರೆ ವ್ಯವಸ್ಥೆ ಮಾಡಿಕೋ.'' ಆಗ ಶ್ರೀಮಾತೆಯವರು ಆ ಮನೆಯ ಕೌಟುಂಬಿಕ ನಿರ್ವಹಣೆ, ಖರ್ಚು ಇತ್ಯಾದಿ ಎಲ್ಲವನ್ನೂ ನೋಡಿಕೊಳ್ಳು

ತ್ತಿದ್ದರೂ, ಅತ್ಯಂತ ಸಂಕೋಚ ಭಾವದಿಂದ ಇರುತ್ತಿದ್ದರು. ಪ್ರತಿದಿನವೂ ದೈನಂದಿನ ಕೆಲಸಗಳನ್ನು ಬೇರೆ ಯಾರೂ ಮಾಡದಿದ್ದರೆ, ಶ್ರೀಮಾತೆಯವರು ಬೆಳಿಗ್ಗೆಯೇ ಎದ್ದು ಮನೆಯನ್ನು ಸ್ವಚ್ಛಗೊಳಿಸುವುದು, ನೆಲ ಒರೆಸುವುದು, ಪಾತ್ರೆ ತೊಳೆಯುವುದು, ಅಡುಗೆ ಮಾಡುವುದು, ಎಲ್ಲರಿಗೂ ಬಡಿಸುವುದು, ಭಕ್ತರು ಹಾಗೂ ಶಿಷ್ಯಂದಿರು ಬಂದಿದ್ದರೆ ಅವರ ಊಟೋಪಚಾರ ಇತ್ಯಾದಿಗಳನ್ನು ಅವರು ಅಷ್ಟೊಂದು ಇಳಿವಯಸ್ಸಿನಲ್ಲೂ ಮಾಡುತ್ತಿದ್ದರು. ಒಂದು ಸಲ ನಾನು ಕಂಡಿದ್ದೆ, ಮಹಾಷ್ಟಮಿಯ ದಿನದಂದು ಸಂಜೆ ಐದು ಗಂಟೆಗೆ ಅವರು ಐದು ಸೇರು ಮೈದಾ ಕಲಸಿ ಪೂರಿ, ಪಲ್ಯ ಮಾಡಲು ಹೊರಟಿದ್ದರು. ಮನೆಯಲ್ಲಿ ತಮ್ಮ ಬಂಧುಗಳೇ ಆದ ಕೆಲವು ಮಂದಿ ಹೆಣ್ಣು ಮಕ್ಕಳಿದ್ದರು; ಆದರೆ ಅವರಾರೂ ಅತ್ತ ಗಮನ ಕೊಡಲಿಲ್ಲ. ನಾನು ಕೇಳಿದೆ, ''ಅಮ್ಮಾ, ನೀವು ವಾತಪೀಡಿತವಾದ ಈ ದೇಹವನ್ನು ಹೊತ್ತುಕೊಂಡು ಇಷ್ಟೊಂದು ಮೈದಾ ಕಲಸುತ್ತಿದ್ದೀರಲ್ಲ? ಇದರಿಂದ ನಿಮಗೆ ತುಂಬಾ ಕಷ್ಟವಾದೀತು. ಎಷ್ಟೋ ಜನ ಇದ್ದಾರಲ್ಲ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಹೌದು ಮಗೂ, ನೀನು ಇವತ್ತು ಇಲ್ಲೇ ಇದ್ದು ಇದನ್ನೆಲ್ಲ ಮಾಡಿಕೊಡು. ಇಲ್ಲದಿದ್ದರೆ ನಾನೇ ಎಲ್ಲವನ್ನೂ ಮಾಡಬೇಕಾಗುವುದು.'' ರಾತ್ರಿ ಬಹಳ ಹೊತ್ತಿನವರೆಗೂ ಶ್ರೀಮಾತೆಯವರು ಎಲ್ಲೆಡೆ ಗಮನ ಕೊಟ್ಟು, ಎಲ್ಲ ಭಕ್ತರ ಹಾಗೂ ಶಿಷ್ಯಂದಿರ, ಮನೆಮಂದಿಯ ಊಟ ಇತ್ಯಾದಿಗಳ ವ್ಯವಸ್ಥೆಯನ್ನು ನೋಡಿಕೊಂಡರು. ತಮ್ಮ ದೇಹದ ಕಡೆಗೆ ಸ್ವಲ್ಪವೂ ಕಾಳಜಿ ವಹಿಸದೆ ಅವರು ಈ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಯಾವಾಗ ಆ ಮನೆಯಲ್ಲಿ ಅವರು ವಾಸ ಮಾಡುವುದು ಸರಿಹೋಗದು, ಹಾಗೂ ಅವರ ಮತ್ತು ಭಕ್ತರ, ಶಿಷ್ಯಂದಿರ ಭಾರವನ್ನು ವಹಿಸಿಕೊಳ್ಳಲು ಯಾರೂ ಸಿದ್ಧರಿಲ್ಲ ಎಂಬುದನ್ನು ತಿಳಿದುಕೊಂಡರೋ ಆಗ ಶ್ರೀಮಾತೆಯವರಿಗೆ ತುಂಬ ದುಃಖವುಂಟಾಯಿತು. ಅವರೆಂದರು, ''ಇವತ್ತು ನನಗೆ ಇಚ್ಛೆಯಾಗುತ್ತಿದೆ – ನನ್ನ ಮಕ್ಕಳನ್ನು (ಭಕ್ತರು ಹಾಗೂ ಶಿಷ್ಯಂದಿರು) ಕರೆದುಕೊಂಡು ಯಾವುದಾದರೂ ಮರದಡಿಗೆ ಹೋಗಿ ಆಶ್ರಯ ಪಡೆಯಬೇಕು ಅಂತ.'' ಈ ಮಾತನ್ನು ಕೇಳಿದ ಸ್ವಾಮಿ ಶಾರದಾನಂದ ಮಹಾರಾಜ್ ಹಾಗೂ ಮಾಸ್ಟರ್ ಮಹಾಶಯರು (ಶ್ರೀ 'ಮ') ಬೇಗನೆ ಮನೆಯೊಂದನ್ನು ಕಟ್ಟಿಸಿಕೊಟ್ಟರು. ಆ ಬಳಿಕ ಶ್ರೀಮಾತೆಯವರು ತಮ್ಮ ಶಿಷ್ಯಂದಿರೊಡನೆ ಆ ಮನೆಯಲ್ಲೇ ತಂಗಿದರು.

ಆಗ ಜಯರಾಮಬಾಟಿ ಗ್ರಾಮ ಅತ್ಯಂತ ಕೊಳಕಾಗಿತ್ತು. ಹಳ್ಳಿಯಾಗಿದ್ದರೂ, ಬೇರೆಲ್ಲಾದರೂ ಅಂತಹ ಗ್ರಾಮ, ಆಚಾರ-ವಿಚಾರಗಳು ಇದ್ದವೋ ಇಲ್ಲವೋ ಸಂದೇಹ. ನಾಲ್ಕೂ ಕಡೆ ಪೊದರು, ಕಾಡುಮರಗಳು. ಶ್ರೀಮಾತೆಯವರು ಸ್ನಾನ ಮಾಡುತ್ತಿದ್ದ ಬಾಂಡೂಜಿ ಕೆರೆ ಮಾತ್ರವೇ ಸ್ವಚ್ಛವಾಗಿತ್ತು. ಬೇರೆ ಕೆರೆಗಳಲ್ಲಿ ಜೊಂಡು, ಪಾಚಿ, ಇನ್ನಿತರ ಸಸ್ಯಗಳೆಲ್ಲ ತುಂಬಿರುತ್ತಿದ್ದವು. ಶ್ರೀಮಾತೆಯವರ ಹೊಸ ಮನೆಯ ಪಕ್ಕದಲ್ಲಿದ್ದ ಕೆರೆಯನ್ನು ಸ್ವಾಮಿ ಶಾರದಾನಂದರ ಹೆಸರಿನಲ್ಲಿ ಖರೀದಿಸಲಾಗಿತ್ತು; ಅದರಲ್ಲೂ ಜೊಂಡು, ಹುಲ್ಲು, ಪಾಚಿಗಳೆಲ್ಲ ತುಂಬಿರುತ್ತಿದ್ದವು. ಅವು ಎಷ್ಟೊಂದು ದಟ್ಟವಾಗಿದ್ದವು ಎಂದರೆ, ಕೆರೆಯ ಒಳಗಿನಿಂದ ಹಳ್ಳಿಯ ಹುಡುಗ, ಹುಡುಗಿಯರು ಶುಷನಿ ಹಾಗೂ ಕಲಮಿ (ಒಂದು ಬಗೆಯ ಸೊಪ್ಪು, ಅಡುಗೆಗೆ ಬಳಸುತ್ತಾರೆ) ಸೊಪ್ಪುಗಳನ್ನು ಸಂಗ್ರಹಿಸುತ್ತಿದ್ದರು. ರಸ್ತೆ ಬದಿಯ ಘಟ್ಟಗಳು ಎಷ್ಟು ಕೆಟ್ಟು ಹೋಗಿದ್ದವೆಂದರೆ, ಮಳೆಗಾಲದಲ್ಲಿ ರಸ್ತೆ ಪಕ್ಕದಲ್ಲಿದ್ದ ಕೆರೆಗಳೆಲ್ಲ ಮಳೆ ನೀರಿನಿಂದ ತುಂಬಿ ಹೋಗುತ್ತಿದ್ದವು. ಮಣ್ಣು, ಕೆಸರು ಎಷ್ಟೊಂದು ಅಂಟು ಅಂಟಾಗಿರುತ್ತಿತ್ತೆಂದರೆ, ಕೆಸರಿನಿಂದಾಗಿ ಮನೆಯ ಕೋಣೆಗಳಲ್ಲಿ ವಾಸ ಮಾಡುವುದೇ ಬಹಳ ಕಷ್ಟದ ಸಂಗತಿಯಾಗಿರುತ್ತಿತ್ತು. ಇದರ ಜೊತೆಗೆ ಮಲೇರಿಯಾ ಕೂಡ ಎಲ್ಲೆಡೆ ವ್ಯಾಪಕವಾಗಿರುತ್ತಿತ್ತು. ಆಗ ಬಳಸಲಾಗುತ್ತಿದ್ದ ನೀರನ್ನು ಸ್ಪರ್ಶ ಮಾಡುವುದಕ್ಕೂ ಅಸಹ್ಯವೆನಿಸುತ್ತಿತ್ತು. ಇಂತಹ ಕೆಸರು ಮಣ್ಣನ್ನು ನೋಡಿ, ಶ್ರೀಮಾತೆಯವರಿಗೆ ತುಂಬಾ ಕಷ್ಟವಾಗುತ್ತಿದೆಯೆಂದು ತಿಳಿದ ಸ್ವಾಮಿ ಶ್ರೀವಾಸಾನಂದರು (ನಾರಾಯಣ ಅಯ್ಯಂಗಾರ್), ಒಂದು ಸಲ ಶ್ರೀಮಾತೆಯವರ ಮನೆ, ಅಂಗಳ ಇತ್ಯಾದಿಗಳಿಗೆಲ್ಲ ಇಟ್ಟಿಗೆ, ಸಿಮೆಂಟ್ ಹಾಕಿ ಉತ್ತಮಗೊಳಿಸಲು ತಮ್ಮ ಬಯಕೆಯನ್ನು ವ್ಯಕ್ತಪಡಿಸಿದರು. ಅದನ್ನು ಕೇಳಿದ ಶ್ರೀಮಾತೆಯವರು, ''ಬೇಡ ಮಗೂ, ಇಟ್ಟಿಗೆಯಿಂದ ಈ ಎಲ್ಲ ಕೆಲಸ ಮಾಡಿಸುವ ಅಗತ್ಯವಿಲ್ಲ. ಇವರ ಬಳಿ ಬೇಕಾದಷ್ಟು ಹಣ ಸಂಗ್ರಹವಾಗಿದೆ ಎಂದು ಜನ ಹೇಳುತ್ತಾರೆ. ಈಗ ಹೇಗಿದೆಯೋ ಹಾಗಿದ್ದರೇ ಚಂದ'' ಎಂದರು.

ಶ್ರೀಮಾತೆಯವರು ಹೀಗೆ ಹೇಳಿದ್ದರಿಂದ, ಆ ಬಾರಿ ಈ ವಿಷಯದಲ್ಲಿ ಎಲ್ಲರೂ ಸುಮ್ಮನಾಗಬೇಕಾಯಿತು. ಎಷ್ಟೋ ಬಾರಿ ನಾವು ಗಮನ ಕೊಟ್ಟು ನೋಡಿದ್ದೇವೆ, ಶ್ರೀಮಾತೆಯವರು ತಮ್ಮನ್ನು ಎಷ್ಟೊಂದು ಅಡಗಿಸಿಟ್ಟುಕೊಳ್ಳುತ್ತಿದ್ದರು ಎಂದರೆ, ಅವರ ನೈಜ ಸ್ವಭಾವವನ್ನು ತಿಳಿಯುವುದು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಮುಂದಿನ ವರ್ಷ ಮತ್ತೆ ಶ್ರೀವಾಸಾನಂದರು ತಮ್ಮ ಇಚ್ಛೆಯನ್ನು ಶ್ರೀಮಾತೆಯವರ ಬಳಿ ವ್ಯಕ್ತಪಡಿಸಿದಾಗ ಅವರೆಂದರು, ''ಹೌದು ಮಗೂ, ಮಳೆಗಾಲದಲ್ಲಿ ತುಂಬ ಕಷ್ಟವಾಗುತ್ತಿದೆ. ನಾರಾಯಣ ಯಾವಾಗ ಹೇಳುತ್ತಾನೋ, ಆಗ ಅದೇ ರೀತಿ ಕೆಲಸ ಮಾಡಿಸುವುದೇ ಒಳ್ಳೆಯದು.'' ಮಲೇರಿಯಾ ಅತ್ಯಂತ ವ್ಯಾಪಕವಾಗಿದ್ದಾಗ, ಹಾಗೂ ಶುದ್ಧ ನೀರಿನ ಅಭಾವ ತೀವ್ರವಾಗಿದ್ದಾಗ ಒಂದು ಬಾವಿ ತೋಡಿಸುವ ಪ್ರಸ್ತಾಪವನ್ನು ಎತ್ತಿದಾಗ ಶ್ರೀಮಾತೆ ಹೇಳಿದರು, ''ಈಗ ಇಲ್ಲಿ ಒಂದು ಬಾವಿ ತೋಡಿಸಿದರೆ ತುಂಬ ಅನುಕೂಲವಾದೀತು.'' ಕಲ್ಕತ್ತೆಯಲ್ಲಿದ್ದ ಶರತ್ ಮಹಾರಾಜರಿಗೆ ವಿಷಯವನ್ನು ತಿಳಿಸಿದಾಗ ಅವರು ಆನಂದದಿಂದ ಅದಕ್ಕೆ ಅನುಮತಿ ನೀಡಿದರು. ಬಳಿಕ ಒಂದು ಒಳ್ಳೆಯ ದಿನವನ್ನು ನೋಡಿ, ಅದಕ್ಕಾಗಿ ಇಟ್ಟಿಗೆಯನ್ನು ತಯಾರಿಸಲು ವ್ಯವಸ್ಥೆ ಮಾಡ

ಲಾಯಿತು. ನಡುನಡುವೆ ಶ್ರೀಮಾತೆಯವರಿಗೆ ಮಲೇರಿಯಾ ಜ್ವರ ಬಂದು, ಅವರ ದೇಹಾರೋಗ್ಯ ಕೆಡುತ್ತಿತ್ತು. ಚಿಕಿತ್ಸೆ ಮಾಡುತ್ತಿದ್ದುದರಿಂದ ತಾತ್ಕಾಲಿಕವಾಗಿ ಅವರ ಆರೋಗ್ಯ ಸುಧಾರಿಸುತ್ತಿದ್ದರೂ, ಆಗಾಗ ಜ್ವರ ಹೆಚ್ಚಾಗಿ ಅವರು ತುಂಬ ಕಷ್ಟಪಡುತ್ತಿದ್ದರು.

ಶ್ರೀಮಾತೆಯವರ ಜನ್ಮದಿನ, ಅದರ ಸಂಬಂಧವಾಗಿ ಪೂಜೆ ಸಮೀಪಿಸುತ್ತಿತ್ತು. ನಾನು ಕೇಳಿದೆ: ''ಅಮ್ಮಾ, ನಿಮ್ಮ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸೋಣ ಅಂದುಕೊಂಡಿದ್ದೇನೆ.'' ಅದಕ್ಕೆ ಶ್ರೀಮಾತೆ ಹೇಳಿದರು: ''ಚೆನ್ನಾಗಿ ಮಾಡು. ಆದರೆ ಅತಿಯಾಗಿ ಏನೂ ಮಾಡಬೇಡ. ಯಾರೆಲ್ಲ ಗಂಡು ಹೆಣ್ಣು ಮಕ್ಕಳು ಇದ್ದಾರೆ, ಯಾರೆಲ್ಲ ಬರಬಹುದು, ಪ್ರಸನ್ನನ ಮನೆ, ವರದನ ಮನೆ ಹಾಗೂ ಕಾಳಿಯ ಮನೆ (ಇವರೆಲ್ಲ ಶ್ರೀಮಾತೆಯವರ ತಮ್ಮಂದಿರು) – ಇವರಿಗೆಲ್ಲ ಹೇಳು.'' ಇನ್ನೂ ಮೂರು ನಾಲ್ಕು ಜನರಿಗೂ ಆಹ್ವಾನಿಸುವಂತೆ ಅವರು ಹೇಳಿದರು. ಯಾವುದೇ ರೀತಿಯಲ್ಲಿ ತೋರಿಸಿಕೊಳ್ಳಬೇಕು ಎಂಬ ಭಾವ ಅವರಲ್ಲಿ ಸ್ವಲ್ಪವೂ ಇರಲಿಲ್ಲ – ಇದನ್ನು ನಾನು ಗಮನಿಸಿದೆ. ಅಷ್ಟರಲ್ಲಿ ಕಾಳೀಮಾವ ಎಲ್ಲವನ್ನೂ ತಿಳಿದು ಹೇಳಿದರು: ''ಅಕ್ಕಾ, ವೈಷ್ಣವ ಭಿಕಾರಿಯೂ ಇದ್ದಾನೆ. ಹೀಗೆ ಮಾಡಿದರೆ ಹೇಗಾದೀತು?'' ಅದಕ್ಕೆ ಶ್ರೀಮಾತೆ ಹೇಳಿದರು, ''ಇರು. ಮನೆಯಲ್ಲಿರುವ ವೈಷ್ಣವ ಭಿಕಾರಿಯನ್ನು ಮೊದಲು ನೋಡಿಕೊಳ್ಳುತ್ತೇನೆ. ಅನಂತರ ನಿನ್ನ ವೈಷ್ಣವ ಭಿಕಾರಿಯನ್ನು ನೋಡಿಕೊಳ್ಳಬಹುದು.''

ಶ್ರೀರಾಮಕೃಷ್ಣರ ಜಯಂತಿಯ ಸಂದರ್ಭದಲ್ಲಿ ಶ್ರೀಮಾತೆಯವರು ಹಿಂದೊಂದು ಬಾರಿ ಕೋಯಲ್‌ಪಾರಾದ ಜಗದಂಬಾ ಆಶ್ರಮದಲ್ಲಿ ತಂಗಿದ್ದರು. ಜಯಂತಿ ಪೂಜೆ ನಡೆಯಲು ಹೆಚ್ಚು ದಿನವಿಲ್ಲ ಎಂದು ತಿಳಿದು ನಾನು ಜಯರಾಮಬಾಟಿಯಿಂದ ಅಲ್ಲಿಗೆ ಹೋಗಿ, ಶ್ರೀಮಾತೆಯವರನ್ನು ಕೇಳಿದೆ: ''ಅಮ್ಮಾ, ಠಾಕೂರರ ಜಯಂತಿ ಹತ್ತಿರ ಬರುತ್ತಿದೆ. ನೀವು ಅನುಮತಿಯಿತ್ತರೆ, ನಾವು ಏನೋ ಕಾರ್ಯಕ್ರಮ ಮಾಡೋಣ ಅಂತ ನಿರ್ಧಾರ ಮಾಡಿದ್ದೇವೆ.'' ಶ್ರೀಮಾತೆ ಹೇಳಿದರು, ''ಒಳ್ಳೆಯದು ಮತ್ತೆ. ಠಾಕೂರರ ಜಯಂತಿ ಆಚರಿಸಿ.'' ಅವರು ನಮ್ಮ ಕೈಗೆ ಐದು ರೂಪಾಯಿ ಕೊಟ್ಟು, ''ನೀವು ಪ್ರಯತ್ನಪಟ್ಟು ಠಾಕೂರರ ಜಯಂತಿ ಆಚರಿಸುತ್ತಿದ್ದೀರಿ. ನಿಮಗೆ ಠಾಕೂರರು ಮಂಗಳವನ್ನುಂಟುಮಾಡಲಿ'' ಎಂದರು. ಆ ಬಾರಿ ಠಾಕೂರರ ಜಯಂತಿ ಆಚರಣೆಯಲ್ಲಿ ಅನೇಕ ಜನರು ಪ್ರಸಾದ ಸ್ವೀಕರಿಸಿದರು. ವಾದ್ಯ ಮೇಳ, ರಾಮನಾಮ ಸಂಕೀರ್ತನೆ, ಕೀರ್ತನೆ ಇತ್ಯಾದಿಗಳಿಂದ ಬಹಳ ಅದ್ದೂರಿಯಾಗಿ ಜಯಂತಿ ನೆರವೇರಿತು. ಶ್ರೀಮಾತೆ ಹೇಳಿದರು: ''ನಾನು ಜೀವಿಸಿರುವಾಗಲೇ ಇದೆಲ್ಲ ಏಕೆ? ಆಮೇಲೆ ಮಾಡಬಹುದಲ್ಲ.'' ಅದನ್ನು ಕೇಳಿ ನನಗೆ ದುಃಖವುಂಟಾಯಿತು. ಅದನ್ನು ತಿಳಿದು ಶ್ರೀಮಾತೆ ಹೇಳಿದರು: ''ಅತಿಯಾಗಿ ಮಾಡುವುದು ಸ್ವಲ್ಪವೂ ಒಳ್ಳೆಯದಲ್ಲ.''

ಆದ್ದರಿಂದಲೇ ಈ ಬಾರಿ ಶ್ರೀಮಾತೆಯವರ ಜನ್ಮದಿನದಂದು ಹೆಚ್ಚು ಸಂತರ್ಪಣೆಯ ವ್ಯವಸ್ಥೆ ಮಾಡಿದೆ. ಪೂಜೆಗೆ ಹಿಂದಿನ ದಿನವೇ ಬಹುತೇಕ ಎಲ್ಲರೂ ಬಂದಿದ್ದರು. ಪೂಜನೀಯ ಶರತ್ ಮಹಾರಾಜರು ಕಲ್ಕತ್ತೆಯಿಂದ ಬಟ್ಟೆ, ಹಣ್ಣು, ಸಿಹಿತಿಂಡಿ ಇತ್ಯಾದಿ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದರು. ಢಾಕಾ ಹಾಗೂ ಇನ್ನಿತರ ಸ್ಥಳಗಳಿಂದ ಕೆಲವು ಮಂದಿ ಭಕ್ತರು ಬಂದಿದ್ದರು. ಶ್ರೀಮಾತೆಯವರ ಶಿಷ್ಯಂದಿರಲ್ಲಿ ಅನೇಕ ಮಂದಿ ಗಂಡು–ಹೆಣ್ಣು ಮಕ್ಕಳು ಈ ಮನೆಯಲ್ಲೇ ಇದ್ದಾರೆ. ಶ್ರೀಮಾತೆಯವರು ನಿಗದಿತ ವೇಳೆಗೆ, ಬೆಳಿಗ್ಗೆ ಮೂರು ಗಂಟೆಗೇ ಎದ್ದು ಜಪ–ಧ್ಯಾನ ಇತ್ಯಾದಿಗಳನ್ನು ಮುಗಿಸಿ, ತಾವೇ ಎಲ್ಲ ವ್ಯವಸ್ಥೆಗಳನ್ನೂ ಮಾಡಲಾರಂಭಿಸಿದರು. ನಾವು ಪೂಜೆಗೆ ಬೇಕಾದ ವಸ್ತುಗಳನ್ನೆಲ್ಲ ಅಣಿ ಮಾಡಿದೆವು. ಶ್ರೀಮಾತೆ ಸ್ನಾನ ಮಾಡಿ ಬಂದು, ಶ್ರೀರಾಮಕೃಷ್ಣರ ನಿತ್ಯಪೂಜೆ ಇತ್ಯಾದಿಗಳನ್ನು ಮಾಡಿ ಮುಗಿಸಿದರು. ಒಬ್ಬಾಕೆ ಶಿಷ್ಯೆ ಶ್ರೀಮಾತೆಯವರು ಹೊಸ ಬಟ್ಟೆಬರೆ ಧರಿಸಲು ಸಹಾಯ ಮಾಡುತ್ತಿದ್ದಳು. ಶ್ರೀಮಾತೆಯವರು ಎರಡು–ಮೂರು ಹೊಸ ಬಟ್ಟೆಗಳೊಂದಿಗೆ ಶರತ್ ಮಹಾರಾಜ್ ಕಳುಹಿಸಿಕೊಟ್ಟ ಬಟ್ಟೆಗಳನ್ನೂ ಧರಿಸಿ ಬಳಿಕ ಮಂಚದ ಮೇಲೆ ಕುಳಿತು, ರಾಧಾರಾಣಿಯ ಮಗುವನ್ನು ಮಡಿಲಲ್ಲಿಟ್ಟುಕೊಂಡು ತಮ್ಮೆರಡೂ ಕಾಲುಗಳನ್ನು ಇಳಿಬಿಟ್ಟು ಪಶ್ಚಿಮ ದಿಕ್ಕಿಗೆ ಎದುರಾಗಿ ಕುಳಿತರು. ಆಗ ಶ್ರೀಮಾತೆಯವರನ್ನು ಕಂಡು, ಸದಾನಂದಮಯಿಯಾದ ಆದ್ಯಾಶಕ್ತಿ – ಮಹಾಮಾಯೆ, ಸೌಮ್ಯ ರೂಪವನ್ನು ತಾಳಿ, ಗೋಪಾಲನನ್ನು ಮಡಿಲಲ್ಲಿರಿಸಿಕೊಂಡು, ಜಗತ್ತಿನ ಕಲ್ಯಾಣಕ್ಕಾಗಿ ಹಾಗೂ ತನ್ನ ಮಕ್ಕಳ ಮಂಗಳಕ್ಕಾಗಿ ಕುಳಿತಿರುವಂತೆ ನನಗನ್ನಿಸಿತು. ಆಗ ಅಲ್ಲಿದ್ದ ಭಕ್ತರು ಹಾಗೂ ಶಿಷ್ಯಂದಿರು ಶ್ರೀಮಾತೆಯವರ ಈ ಭಾವವನ್ನು ನೋಡುತ್ತ ಆಶ್ಚರ್ಯಚಕಿತರಾದರು. ನಾನು ಒಂದು ಚೆಂಡುಹೂವಿನ ಹಾರವನ್ನು ಅವರಿಗೆ ಅರ್ಪಿಸಲೆಂದು, ಹಾರವನ್ನು ಕೈಯಲ್ಲಿ ಹಿಡಿದು ನಿಂತಿದ್ದೆ. ಶ್ರೀಮಾತೆ ಹೇಳಿದರು, ''ಹಾರ ಕೊಡಪ್ಪಾ, ಕೊಟ್ಟುಬಿಡು.'' ನನಗೆ ಸಂದೇಹವುಂಟಾಗಿ, ಶ್ರೀಮಾತೆಯವರ ಒಬ್ಬಳು ಸೇವಕಿಗೆ, ''ನೀನು ಈ ಹಾರವನ್ನು ಅವರಿಗೆ ಕೊಡು'' ಎಂದೆ. ಆಕೆ ಆ ಹಾರವನ್ನು ಶ್ರೀಮಾತೆಯವರ ಕೊರಳಿಗೆ ತೊಡಿಸಿದಳು. ಆದರೆ ಆ ಹಾರ ತುಂಬ ದೊಡ್ಡದಾಗಿತ್ತು. ಶ್ರೀಮಾತೆಯವರ ಪಾದಗಳವರೆಗೂ ಅದು ಇಳಿಬಿದ್ದಿದ್ದ ಕಾರಣ, ತುಂಬ ಸುಂದರವಾಗಿ ಕಾಣಿಸುತ್ತಿತ್ತು. ಅಷ್ಟರಲ್ಲಿ ನಾವೆಲ್ಲ ಶ್ರೀಮಾತೆಯವರ ಪಾದಪದ್ಮಗಳಿಗೆ ಪುಷ್ಪಾಂಜಲಿ ನೀಡಲಾರಂಭಿಸಿದೆವು. ಆಗ ಅಲ್ಲಿದ್ದ ಶ್ರೀಮಾತೆಯವರ ಭಕ್ತರು ಹಾಗೂ ಶಿಷ್ಯಂದಿರು – ಎಲ್ಲರೂ ಅವರಿಗೆ ಪುಷ್ಪಾಂಜಲಿ ನೀಡಿದರೆ ಚೆನ್ನಾಗಿರುತ್ತದೆ ಎಂದು ನನಗನ್ನಿಸಿತು. ನಾನು ಸಾಕಷ್ಟು ಹೂಗಳನ್ನು ತೆಗೆದುಕೊಂಡು ಶ್ರೀಮಾತೆಯವರ ಪಾದಗಳಿಗೆ ಪುಷ್ಪಾಂಜಲಿ ಅರ್ಪಿಸುತ್ತ ಹೇಳಿದೆ: ''ಅಮ್ಮಾ, ಇವತ್ತು ನಿಮ್ಮ ಪಾದಗಳಿಗೆ ಪುಷ್ಪಾಂಜಲಿ ನೀಡಿ ಜೀವನವನ್ನು ಧನ್ಯವಾಗಿಸಬೇಕು, ಕೃತಾರ್ಥರಾಗಬೇಕು ಎಂಬುದೇ ನಿಮ್ಮ ಅನೇಕ ಮಂದಿ ಶಿಷ್ಯಂದಿರ ಬಯಕೆ. ಆದರೆ ಬಹಳ ದೂರ

ದಿಂದ ರಸ್ತೆಯನ್ನು ಕ್ರಮಿಸಿ ಬರುವುದು ಎಷ್ಟೋ ಜನರಿಗೆ ಸಾಧ್ಯವಿಲ್ಲ – ಅವರಿಗೆ ಎಷ್ಟೇ ಬಯಕೆಯಿದ್ದರೂ ಕೂಡ. ಆದ್ದರಿಂದ ಅವರೆಲ್ಲರ ಪರವಾಗಿ ನಾನೇ ನಿಮ್ಮ ಪಾದಪದ್ಮಗಳಲ್ಲಿ ಪುಷ್ಪಾಂಜಲಿ ಅರ್ಪಿಸುತ್ತಿದ್ದೇನೆ.'' ಶ್ರೀಮಾತೆಯವರು ನಗುತ್ತ, ಬಹಳ ಆನಂದಗೊಂಡು ಹೇಳಿದರು: ''ಮಗೂ, ನಾನು ಶ್ರೀರಾಮಕೃಷ್ಣರ ಬಳಿ ಪ್ರಾರ್ಥಿಸುತ್ತೇನೆ: ಅವರು ಎಲ್ಲರಿಗೂ ಮಂಗಳವನ್ನುಂಟು ಮಾಡಲಿ, ಯಾರು ಎಲ್ಲೇ ಇರಲಿ – ಎಲ್ಲರಿಗೂ ಕಲ್ಯಾಣವನ್ನು ಉಂಟುಮಾಡಲಿ ಎಂದು.'' ಹೀಗೆ ಹೇಳುತ್ತ ಶ್ರೀಮಾತೆಯವರು ಸ್ವಲ್ಪ ಹೊತ್ತು ಭಾವಾವಿಷ್ಟರಾಗಿ ಇದ್ದುಬಿಟ್ಟರು. ಮತ್ತೆ ಅವರು ಸಾಮಾನ್ಯ ಸ್ಥಿತಿಗೆ ಬಂದಾಗ ನಾನು ಹೇಳಿದೆ, ''ಅಮ್ಮಾ, ಈಗ ನೀವು ತಿಂಡಿ ಮಾಡಿ.'' ಅವರು ತಿಂಡಿ ತಿಂದು, ಎಲ್ಲರಿಗೂ ಪ್ರಸಾದ ನೀಡಿದರು. ಆಗ ಅಲ್ಲಿದ್ದ ಶಿಷ್ಯಂದಿರಿಗೆಲ್ಲ ಅದು ಅತ್ಯಂತ ಸ್ಮರಣಾರ್ಹ ದಿವಸವಾಗಿತ್ತು. ಸದಾನಂದಮಯಿಯೂ, ಪ್ರಸನ್ನರೂ ಆಗಿ ಶ್ರೀಮಾತೆಯವರು ಅಪಾರ ಕರುಣೆಯಿಂದ ಪ್ರೀತಿಪೂರ್ವಕವಾಗಿ ಜಗತ್ತಿನ ಎಲ್ಲ ಶಿಷ್ಯಂದಿರ ಮಂಗಳಕ್ಕಾಗಿ ಕೃಪಾಪ್ರವಾಹವನ್ನು ಹರಿಸುತ್ತಿದ್ದಾರೆ ಎಂದು ಅನೇಕರಿಗೆ ಅನ್ನಿಸಿತು.

ಕೆಲವು ದಿನಗಳ ನಂತರ ಒಂದು ದಿನ ಮಾತಿನ ನಡುವೆ, ಅದೇ ಹೊಸ ಮನೆಯಲ್ಲಿ ಶ್ರೀಮಾತೆ ನನಗೆ ಹೇಳಿದರು: ''ನನ್ನ ಜನ್ಮಸ್ಥಾನದ ಜಮೀನನ್ನು ಕೊಂಡುಕೊಂಡು, ಅಲ್ಲಿ ಒಂದು ಮನೆ ಕಟ್ಟಿಸಲು ಶರತ್‌ಗೆ ಬರೆದು ತಿಳಿಸು.'' ಆಗ ರಾಧಾರಾಣಿ ಪಶ್ಚಿಮ ಭಾಗದಲ್ಲಿ ಬಾಗಿಲಿರುವ ಅಡುಗೆ ಮನೆಯಲ್ಲಿ ವಾಸ ಮಾಡುತ್ತಿದ್ದಳು. ಆ ಸಮಯದಲ್ಲೇ ಆ ಕೋಣೆಯಲ್ಲಿ ಕಷ್ಟವಾಗುತ್ತಿರುವ ವಿಷಯವನ್ನು ತಿಳಿಸಿದಾಗ ಶ್ರೀಮಾತೆ ಹೇಳಿದರು, ''ಇರಮ್ಮಾ ರಾಧು, ಅಲ್ಲಿ ಮನೆ ನಿರ್ಮಾಣವಾಗಲಿ, ನಾವು ಅಲ್ಲಿಗೆ ಹೋಗಿ ವಾಸ ಮಾಡೋಣ.'' ಅದನ್ನು ಕೇಳಿ ರಾಧಾರಾಣಿಗೆ ಬಹಳ ಆನಂದವಾಯಿತು. ನಾನಂದೆ: ''ಅಮ್ಮಾ, ನಿಮ್ಮ ಜನ್ಮಸ್ಥಳದ ಜಮೀನನ್ನು ಮಾವಂದಿರು ಏಕೆ ಮಾರುತ್ತಾರೆ?'' ಒಂದು ಸಲ ರಾಂಚಿಯ ಭಕ್ತರುಗಳು ಜನ್ಮಸ್ಥಳದಲ್ಲಿ ಕಲ್ಲುಗಳನ್ನು ಹಾಕಿ ಕಟ್ಟಿಸಿ, ಅಲ್ಲೊಂದು ಗುರುತು ಇರಲೆಂದು ಏನೋ ಮಾಡಬಯಸಿದ್ದರು. ಕಾಳೀಮಾವನಿಗೆ ಈ ವಿಷಯವನ್ನು ತಿಳಿಸಿದಾಗ ಅವರು ಹೇಳಿದ್ದರು, 'ಎಷ್ಟು ಜಮೀನಿಗೆ ಕಲ್ಲು ಕಟ್ಟಿಸಿ ಗುರುತು ಮಾಡುತ್ತೀರೋ ಅಷ್ಟು ಜಾಗಕ್ಕೆ ಹಣ ಕೊಡಬೇಕು' ಎಂದು. ಈಗ ಏನು ಮಾಡುತ್ತಾರೋ ಯಾರಿಗೆ ಗೊತ್ತು? ಆಗ ಅವೆಲ್ಲ ಕಾರಣದಿಂದ ಆ ಜಮೀನನ್ನು ಪಡೆದುಕೊಳ್ಳಲಾಗಲಿಲ್ಲ. ಈಗ ಮಾವಂದಿರು ಜಮೀನನ್ನು ಯಾಕೆ ಕೊಡುತ್ತಾರೆ? ಶ್ರೀಮಾತೆ ಹೇಳಿದರು, ''ನೀನು ಕಾಳಿಯನ್ನು ನನ್ನ ಹತ್ತಿರ ಬರಲು ಹೇಳು, ನಾನು ಹೇಳುತ್ತಿದ್ದೇನೆ.'' ಕಾಳೀಮಾವ ಬಂದಾಗ ಶ್ರೀಮಾತೆ ಹೇಳಿದರು, ''ನೋಡು ಕಾಳಿ, ನನ್ನ ಮಕ್ಕಳು ಯಾರೆಲ್ಲ ಇದ್ದಾರೋ, ಅವರು ಒಂದಲ್ಲ ಒಂದು ದಿನ ನನ್ನ ಜನ್ಮಸ್ಥಳವನ್ನು ಹೇಗೋ ಪಡೆದುಕೊಂಡು ಬಿಡುತ್ತಾರೆ. ಅದಕ್ಕೆ ಬದಲಾಗಿ, ನಾನು ಇರುವಾಗಲೇ ಮೂರು ಜನರಿಗೂ (ಕಾಳೀಮಾವ, ಪ್ರಸನ್ನಮಾವ, ವರದ ಮಾವ) ಮುನ್ನೂರು ರೂಪಾಯಿಯಂತೆ ಕೊಡುತ್ತೇನೆ. ಆ ಜಮೀನನ್ನು ಬಿಟ್ಟುಬಿಡಿ.'' ಕಾಳೀಮಾವ ಹೇಳಿದರು, ''ಆಗಲಿ ಅಕ್ಕಾ. ನಿನ್ನ ಮನೆ ನಿರ್ಮಾಣವಾಗಲಿ. ಅದಕ್ಕಾಗಿ ಜಾಗವನ್ನು ಹಾಗೇ ಕೊಟ್ಟುಬಿಡಬೇಕಿತ್ತು. ಆದರೂ ನನಗೆ.. ಹಣ ಕೊಡಬೇಕು.''[೨] ಅದಕ್ಕೆ ಉತ್ತರವಾಗಿ ಶ್ರೀಮಾತೆ ನನ್ನನ್ನು ಕರೆದು ಹೇಳಿದರು, ''ಶರತ್‌ಗೆ ಬರೆದು ತಿಳಿಸು ಕಾಳಿಗೆ.. ರೂಪಾಯಿ ಕೊಟ್ಟುಬಿಡು ಅಂತ. ಉಳಿದವರಿಗೆ ತಿಳಿಸುವುದು ಬೇಡ.'' ಅಂತೂ ಕಾಳೀಮಾವ ಅದಕ್ಕೆ ಒಪ್ಪಿದ ನಂತರ, ಶ್ರೀಮಾತೆಯವರು ವರದ ಮಾವನನ್ನೂ ಕರೆದು ೩೦೦ರೂ. ಗೆ ಪ್ರತಿಯಾಗಿ ಆ ಜಮೀನನ್ನು ಬಿಟ್ಟುಕೊಡಲು ಹೇಳಿದರು. ಅದಕ್ಕೆ ವರದ ಮಾವ ಹೇಳಿದರು, ''ಅಕ್ಕಾ ಒಳ್ಳೆಯದಾಯಿತು. ನಿನಗೆ ಮನೆ ನಿರ್ಮಾಣವಾಗುವುದು; ಜಾಗವನ್ನಂತೂ ಹಾಗೆಯೇ ಬಿಟ್ಟುಬಿಡಬೇಕಾಗಿತ್ತು. ಎಲ್ಲರಿಗೂ ಹಣ ಕೊಡುವುದಾಗಿದ್ದರೆ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.'' ಆಗ ಪ್ರಸನ್ನ ಮಾವ ಕಲ್ಕತ್ತೆಯಲ್ಲಿದ್ದರು. ಈ ವಿಷಯವನ್ನೆಲ್ಲ ಶರತ್ ಮಹಾರಾಜರಿಗೆ ತಿಳಿಸಿದಾಗ, ಅವರು ಲಲಿತ ಬಾಬುವಿಗೆ (ಲಲಿತ ಚಂದ್ರಚಟ್ಟೋಪಾಧ್ಯಾಯ) ಎಲ್ಲವನ್ನೂ ತಿಳಿಸಿ, ಅದಕ್ಕೆ ತಕ್ಕ ವ್ಯವಸ್ಥೆ ಮಾಡಲು ತಿಳಿಸಿದರು. ಲಲಿತ ಬಾಬು ಪ್ರಸನ್ನ ಮಾವನನ್ನು ಕಲ್ಕತ್ತೆಯ ಶ್ರೀಮಾತೆಯವರ ಮನೆಗೆ ('ಉದ್ಬೋಧನ') ಆಹ್ವಾನಿಸಿ, ತುಸು ಪ್ರಣಾಮಿ (ಕಾಣಿಕೆ) ಕೊಟ್ಟು, ವರದ ಮಾವನ ಹೆಸರಿನಲ್ಲಿ ಒಂದು ವಕಾಲತ್ತನ್ನು ತಯಾರಿಸಿ, ಪ್ರಸನ್ನ ಮಾವನ ಭಾಗವನ್ನು ವರದ ಮಾವನ ಮೂಲಕ ಮಾರಾಟ ಮಾಡುವುದು ಸಾಧ್ಯವಾಯಿತು. ✱

---

೨ ಲೇಖಕರು ತಮ್ಮ ಬೇರೊಂದು ಸ್ಮೃತಿಲೇಖನದಲ್ಲಿ ಬರೆದಿರುವಂತೆ, ಕಾಳೀಮಾವ ಹೀಗೆ ಹೇಳಿದ್ದರು: ''ಆದರೂ ನನಗೆ ನೀನು ಇನ್ನೊಂದು ೧೦೦ರೂ ಹೆಚ್ಚಾಗಿ ಕೊಡಬೇಕು. ನನ್ನ ಹಣದ ತೊಂದರೆ ನಿನಗೆ ಗೊತ್ತಲ್ಲ.'' ಬಳಿಕ ಶ್ರೀಮಾತೆ ಲೇಖಕನಿಗೆ ಹೇಳಿದ್ದರು, ''ಮಗೂ, ಶರತ್‌ಗೆ ಬರೆದು ತಿಳಿಸು, ಅವನಿಗೆ ೧೦೦ರೂ ಹೆಚ್ಚಾಗಿ ಕೊಟ್ಟುಬಿಡು ಅಂತ.'' *(– ಸಂ.)*

> ''ಪ್ರಾರ್ಥನೆ, ಧ್ಯಾನ, ಯಾತ್ರೆ, ಅಥವಾ ಹಣ ಸಂಪಾದನೆ ಇವನ್ನೆಲ್ಲ ಜೀವನದ ಆರಂಭದ ಘಟ್ಟದಲ್ಲೇ ಮಾಡಬೇಕು.. ವಯಸ್ಸಾದ ಮೇಲೆ ದೇಹ, ಮನಸ್ಸು ದುರ್ಬಲವಾಗುವುವು. ಅದು ಹೋರಾಡುವುದಕ್ಕೆ ಸಮಯವೆ? ಇಲ್ಲಿನ ಹುಡುಗರನ್ನೇ ನೋಡು, ಅವರು ತಮ್ಮ ಯೌವನದಲ್ಲೇ ತಮ್ಮ ಮನಸ್ಸನ್ನು ಭಗವಂತನ ಕಡೆಗೆ ಹರಿಸಿದರು. ಅದೇ ಯೋಗ್ಯವಾದದ್ದು, ಅದೇ ಸರಿಯಾದ ಸಮಯ. ಪ್ರಾರ್ಥನೆ, ಧ್ಯಾನಗಳನ್ನು ನಿನ್ನ ಯೌವನದಲ್ಲೇ ಮಾಡಿ ಮುಗಿಸಬೇಕು. ಆ ಬಳಿಕ ಎಲ್ಲ ಮಾಡುವೆ ಎಂದು ಭಾವಿಸಿದ್ದೀಯಾ? ಏನೇ ಸಾಧಿಸುವುದಿದ್ದರೂ ಅದನ್ನು ಮಾಡಲು ಇದೇ ಸರಿಯಾದ ಸಮಯ''
>
> — ಶ್ರೀಮಾತೆ ಶಾರದಾದೇವಿ